ಉದಯವಾಣಿ

**Friday 23th December 2022, Page No.04**

# ಆರ್.ವಿ.ಕಾಲೇಜಿನಲ್ಲಿ ಕಾರ್ಯಾಗಾರ



**ಕೆಂಗೇರಿ:** ಇಲ್ಲಿನ ಆರ್.ವಿ.ಕಾಲೇಜಿನಲ್ಲಿ 6ನೇ ಅಂತಾರಾಷ್ಟ್ರೀಯ ಸಮ್ಮೇಳನದ ಪ್ರಯುಕ್ತ ಸುಸ್ಥಿರ ಪರಿಹಾರಗಳಿಗಾಗಿ ಗಣಕ ವ್ಯವಸ್ಥೆಗಳು ಮತ್ತು ಮಾಹಿತಿ ತಂತ್ರಜ್ಞಾನ ಎಂಬ ಹೊಸ ಯುಗದ ತಾಂತ್ರಿಕ ವಿಜ್ಞಾನ ಹಾಗೂ ನವೀಕರಣದ ಕುರಿತು ಮೂರು ದಿನಗಳ ಕಾಲ ಕಾರ್ಯಾಗಾರ ಆಯೋಜಿಸಲಾಗಿದೆ. ಜಾಗತಿಕ ಫೌಂಡರೀಸ್‌ನ ಇಂಟರ್ ನೆಟ್ ಪ್ರೋಟೋಕಾಲ್ ಅಭಿವೃದ್ಧಿ ಮತ್ತು ವಿನ್ಯಾಸದ ಸಿಇಒ ಡಾ.ದಿವೇಶ್ ದ್ವಿವೇದಿ ಮಾತನಾಡಿ, ವಿದ್ಯಾರ್ಥಿಗಳ ಮನಸ್ಸಿನ ಕುತೂಹಲವನ್ನು ಸ್ಪರ್ಶಿಸುವ ರೀತಿಯಲ್ಲಿ ಪ್ರಾತ್ಯಕ್ಷಿಕೆಗಳ ಮೂಲಕ ಉದ್ಯಮ ತಜ್ಞರು ಕಾರ್ಯಾಗಾರದಲ್ಲಿ ವಿವರಿಸಲಿದ್ದಾರೆ ಎಂದರು. ಪ್ರತಿಷ್ಠಿತ ಫ್ಲೋರಿಡಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ.ಎಸ್.ಎಸ್.ಅಯ್ಯಂಗಾರ್ ಕಾರ್ಯಾಗಾರದ ಸಮಗ್ರ ವಿವರವುಳ್ಳ ಪುಸ್ತಕ ಬಿಡುಗಡೆಗೊಳಿಸಿ, ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ತಜ್ಞರ ನಡುವೆ ಬೌದ್ಧಿಕ ಚರ್ಚೆಗಳನ್ನು ಉತ್ತೇಜಿಸುವ ಮೂಲಕ ಶಿಕ್ಷಣ ಮತ್ತು ಉದ್ಯಮದ ಪ್ರಪಂಚಗಳನ್ನು ಒಟ್ಟಿಗೆ ತರುವ ಗುರಿಯನ್ನು ಹೊಂದಲಾಗಿದೆ ಎಂದರು. ಭಾರತೀಯ ಐಬಿಎಂ ಸಂಶೋಧನೆ ಅಲ್ ಸೈನ್ಸ್-ಕ್ವಾಂಟಮ್ ಅಪ್ಲಿಕೇಷನ್ಸ್‌ನ ಲೀಡ್ ಡಾ.ಎಲ್.ವೆಂಕಟಸುಬ್ರಹ್ಮಣ್ಯಂ, ಐಇಇಇ ಬೆಂಗಳೂರು ವಿಭಾಗದ ಪ್ರಾಧ್ಯಾಪಕಿ ಪ್ರೊ.ಡಾ.ದೀಪಾಶೆಣೈ, ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್‌ನ ಅಧ್ಯಕ್ಷ ಡಾ.ಎಂ.ಪಿ.ಶ್ಯಾಮ್, ಪ್ರಾಂಶುಪಾಲ ಡಾ.ಕೆ.ಎನ್.ಸುಬ್ರಹ್ಮಣ್ಯ, ಉಪಪ್ರಾಂಶುಪಾಲೆ ಡಾ.ಕೆ.ಎಸ್.ಗೀತಾ ಇತರರಿದ್ದರು.